ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 2 ಕೌಲೂರು ಶರಣಪ್ಪ ಬಿನ್ ಲೇಟ್ ಕೌಲೂರು ಬಸವಣ್ಣಪ್ಪ

(ದಿನಾಂಕ 12-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿಗಳ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದಃ-

ವಾದಿಯಾದ ಬಾವಿ ಕೊಟ್ರೇಶಪ್ಪನವರು ನನ್ನ ತಾಯಿ ಕೌಲೂರು ಸರೋಜಮ್ಮರವರ ವಿರುದ್ಧ ದಾಖಲುಪಡಿಸಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಾದಿಯು ನನಗೆ ಪರಿಚಯಸ್ಥರು ಎಂದರೆ ಸರಿ. ನಮ್ಮ ಮನಗೆ ನಮ್ಮ ತಾಯಿ ಯಜಮಾನರು ಎಂದರೆ ಸರಿ. ಹನುಮಗೊಂಡನಹಳ್ಳಿಯಲ್ಲಿ ನಮಗೆ ಸರ್ವೆ ನಂ. 131/ಬಿ ರಲ್ಲಿ 1 ಎಕರೆ 70 ಸೆಂಟ್ಸ ಭೂಮಿ ಇರುತ್ತದೆಂದರೆ ಸರಿ.



ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 2 ಕೌಲೂರು ಶರಣಪ್ಪ ಬಿನ್ ಲೇಟ್ ಕೌಲೂರು ಬಸವಣ್ಣಪ್ಪ

2. ದಾವಾ ಸ್ವತ್ತಿನ ಸರ್ವೆ ನಂಬರ್ 206/ಎ ಮತ್ತು 206/ಬಿ ಆಗಿರುತ್ತದೆ. ದಾವಾ ಸ್ವತ್ತಿನ ಸರ್ವೆ ನಂಬರ್ 206/ಎ ಒಟ್ಟು ವಿಸ್ತೀರ್ಣ 4 ಎಕರೆ 29 ಸೆಂಟ್ಸ ಇರುತ್ತದೆ. ದಾವಾ ಸ್ವತ್ತಿನ ಸರ್ವೆ ನಂಬರ್ 206/ಬಿ ಒಟ್ಟು ವಿಸ್ತೀರ್ಣ 2 ಎಕರೆ 23 ಸೆಂಟ್ಸ ಇರುತ್ತದೆ.

3. ನಮ್ಮ ತಾಯಿಗೆ ಒಟ್ಟು 4 ಜನ ಮಕ್ಕಳು ಅದರಲ್ಲಿ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ದಾವಾ ಸ್ವತ್ತುಗಳು ಮನೆ ಆಶ್ರಿತ ಭೂಮಿಗಳಾಗಿರುತ್ತವೆಂದರೆ ಸರಿ. ದಿಃ13-11-2011 ರಂದು ನಾವು ವಾದಿಗೆ ನೊಂದಾಯಿತ ಕ್ರಯ ಕರಾರನ್ನು ಮಾಡಿಕೊಟ್ಟಿರುತ್ತೇವೆಂದರೆ ಸರಿಯಲ್ಲ.

4. ವಾದಿಯು ಎ ಪಿ ಎಂ ಸಿ ಯಾರ್ಡನಲ್ಲಿ ಬೀಜ ಗೊಬ್ಬರದ ಅಂಗಡಿ ಇಟ್ಟಿರುವುದನ್ನು ನಾನು ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ಬೀಜ ಗೊಬ್ಬರಗಳನ್ನು ಕೊಡಿಸುತ್ತಿದ್ದರೆಂದು ನುಡಿಯುತ್ತಾರೆ. ಈ ಮಾತನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ವಾದಿಯು ಎ ಪಿ ಎಂ ಸಿ ಯಾರ್ಡನಲ್ಲಿ ರೈತರು ತರುವಂತಹ ಧಾನ್ಯಗಳನ್ನು ಬಿಡ್ ಮೂಲಕ ಖರೀದಿಸುವ ಬಗ್ಗೆ ಮಾತ್ರ ಪರವಾನಿಗೆಯನ್ನು ಹೊಂದಿರುತ್ತಾರೆಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲವೆಂದು ನುಡಿಯುತ್ತಾರೆ.

(ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೇಳಿದರು, ನೀಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ